# ಹಲೋ ಬೆಂಗಳೂರು!

ಬೆಂಗಳೂರಿನ ಸ್ವಚ್ಛತೆ
ನಮ್ಮೆಲ್ಲರ ಜವಾಬ್ದಾರಿ.
ಹಂಪಿಯ ಕಲ್ಲಿನ ರಥದ ಮೇಲೆ,
ಪಿಜಿ ತಿಂಗಳಿಗೆ 4000.
ರಂಗನತಿಟ್ಟು ಪಕ್ಷಿಧಾಮದಲ್ಲಿ
ತಿಗಣೆಯ ಸಮಸ್ಯೆಯೇ?
100% ನಿವಾರಣೆ.
ಇಲ್ಲಿ ಲೆನಿನ್ ಶರ್ಟ್ ದೊರೆಯುತ್ತದೆ.
ವ್ಯಾಸಮಹರ್ಷಿಗಳ ಪುತ್ಥಳಿ
ಲೋಕಾರ್ಪಣೆ.
ಬೆಂಗಳೂರ್ ಚಲೋ!

ನಮಸ್ಕಾರ ಬೆಂಗಳೂರು!
ಶಿಥಿಲ ಗೋಡೆಯ ಇಟ್ಟಿಗೆಗಳ ಮೇಲೆ
ಧಾವಿಸುತ್ತಿರುವ ನಾಯಕ
ಒಂದು ಕೈಯಲ್ಲಿ ಮಚ್ಚು,
ಮತ್ತೊಂದರಲ್ಲಿ ಪಿಸ್ತೂಲು.
ಚಲನಚಿತ್ರದ ಯಶಸ್ಸಿಗಾಗಿ
ಶುಭಕೋರುವ
ಹತ್ತಾರು ತಲೆಗಳು.

ಈ ಸ್ಥಳದಲ್ಲಿ ಮೊಬೈಲ್ ಮತ್ತು
ಧೂಮಪಾನ ನಿಷೇಧಿಸಲಾಗಿದೆ.
ಶಾಲೆಯ ಗೋಡೆಗಳಿವು
ಭಿತ್ತಿಪತ್ರ ಅಂಟಿಸಬೇಡಿ.
ಮೂ. ವಿ. ಮಾಡಬೇಡಿ.
ಇಲ್ಲಿ CCTV ಅಳವಡಿಸಲಾಗಿದೆ.
ಇಲ್ಲಿ ಗಲೀಜು ಮಾಡುವವರು
ನಾಯಿಗಳು.
ಮನೆಯಿಂದಲೇ ಉದ್ಯೋಗ,
ಪ್ಯಾನ್ ಕಾರ್ಡ್, ಪಾಸ್‌ಪೋರ್ಟ್.
ಮಹಾದೇವಿ ಎಸ್. ನಿಧನ,
ಭಾವಪೂರ್ಣ ಶ್ರದ್ಧಾಂಜಲಿ.

ಬದಲಾಗಿ, ಬದಲಿಸೋಣ.
ಬೈಕ್ ಇನ್ಶ್ಯೂರೆನ್ಸ್ ಐದೇ ನಿಮಿಷ,
ಇಲ್ಲೇ! ಈವಾಗ್ಲೇ!
ನೀರು ಉಳಿಸಿ, ಕಾಡು ಬೆಳೆಸಿ.
ಕಣ್ಣು ಬೆಳ್ಳಗೆ ಮಾಡಿದ ಸೂರ್ಯಂಗೆ
ಕಪ್ಪು ಹುರಿಮೀಸೆ.
ಶಶಿ ಇದ್ದಲ್ಲಿ ಕೊಳೆ ಇನ್ನೆಲ್ಲಿ?

ನೆನಪಿರಲಿ ಇದು ನಿಮ್ಮ ನಗರ.
ಇಂದು ಸರ್ಕಾರಿ ಖರ್ಚಿನಲ್ಲಿ ಜಯಂತಿ.
ಖಾಲಿ ಹುದ್ದೆಗಳನ್ನು ಭರ್ತಿ ಮಾಡಿ.
ನಿರುದ್ಯೋಗ ಭತ್ಯೆ ನೀಡಿ.
ಪ್ರಬುದ್ಧ ಭಾರತದ ನಿರ್ಮಾಣಕ್ಕಾಗಿ,
ಪ್ರಜಾಪ್ರಭುತ್ವ ಉಳಿಸೋಣ

